2009ರಲ್ಲಿ ಚರ್ಚ್‌ಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಬಂಧಿಸಲಾದ ಆರೋಪಿತರ ವಿವರ

ಕ್ರ.ಸಂ.	ನಗರ/ಜಿಲ್ಲೆ	ಬಂಧಿಸಲಾದ ಆರೋಪಿತರ ಸಂಖ್ಯೆ
1	ಬೀದರ್	ತನಿಖೆ ನಡೆದಿದ್ದು ಯಾರನ್ನು ಬಂಧಿಸಿರುವುದಿಲ್ಲ.
2	ಉಡುಪಿ	ತನಿಖೆ ನಡೆದಿದ್ದು ಯಾರನ್ನು ಬಂಧಿಸಿರುವುದಿಲ್ಲ.

2010ರಲ್ಲಿ ಚರ್ಚ್‌ಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಬಂಧಿಸಲಾದ ಆರೋಪಿತರ ವಿವರ

ಕ್ರ.ಸಂ.	ನಗರ/ಜಿಲ್ಲೆ	ಬಂಧಿಸಲಾದ ಆರೋಪಿತರ ಸಂಖ್ಯೆ
1	ಮೈಸೂರು ನಗರ	ತನಿಖೆ ನಡೆದಿದ್ದು ಯಾರನ್ನು ದಸ್ತಗಿರಿ ಮಾಡಿರುವುದಿಲ್ಲ.
2	ಮಂಡ್ಯ	02
3	ಉಡುಪಿ	ತನಿಖೆ ನಡೆದಿದ್ದು ಯಾರನ್ನು ದಸ್ತಗಿರಿ ಮಾಡಿರುವುದಿಲ್ಲ.
	ಒಟ್ಟು	**02**

ಅಂಗನವಾಡಿ ಕಾರ್ಯಕರ್ತರ ಗೌರವ ಧನ

399 (965) ಶ್ರೀ ಗೋಪಾಲಭಂಡಾರಿ ಹೆಚ್ (ಕಾರ್ಕಳ) : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ನೀಡಲಾಗುತ್ತಿರುವ ಗೌರವಧನ ಎಷ್ಟು; ಗೌರವಧನ ನೀಡುವಲ್ಲಿ ಆಗುತ್ತಿರುವ ತಾರತಮ್ಯ ಹಾಗೂ ವ್ಯತ್ಯಾಸಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಕೂಡಲೆ ಸರಿಪಡಿಸಲಾಗುವುದೇ;

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಚಿಕ್ಕಬಳ್ಳಾಪುರ, ಉಡುಪಿ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಈ ಹಿಂದಿನ ಸಾಲುಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ನಿಗದಿತ ಸಮಯದಲ್ಲಿ ಖಜಾನೆಯಿಂದ ಸೆಳೆಯದೆ ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ನೀಡುವಲ್ಲಿ ವಿಳಂಬವಾಗಿರುತ್ತದೆ. ಈ ರೀತಿಯ ಪ್ರಕರಣಗಳು ಉದ್ಭವಿಸಿದಾಗ ಕೂಡಲೆ ಸರ್ಕಾರದಿಂದ ಹೆಚ್ಚುವರಿ ಹಣ ಪಡೆದು ಸರಿಪಡಿಸಲಾಗುವುದು.

ಅನುಬಂಧ

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರ:

ಕ್ರ ಸಂ.	ವಿದ್ಯಾರ್ಹತೆಯ ವಿವರ	ಭಾರತ ಸರ್ಕಾರದಿಂದ ನೀಡುತ್ತಿರುವ ಗೌರವಧನ	ರಾಜ್ಯ ಸರ್ಕಾರದಿಂದ ನೀಡುತ್ತಿರುವ ಹೆಚ್ಚುವರಿ ಗೌರವಧನ	ಒಟ್ಟು
1	ಕಾರ್ಯಕರ್ತೆಯರಿಗೆ ಎಸ್.ಎಸ್.ಎಲ್.ಸಿ. ಫೇಲ್	ರೂ.1438	ರೂ.1000	ರೂ.2438
2	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 5 ವರ್ಷದ ಅನುಭವ	ರೂ.1469	ರೂ.1000	ರೂ.2469
3	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 10 ವರ್ಷದ ಅನುಭವ	ರೂ.1500	ರೂ.1000	ರೂ.2500

4	ಎಸ್.ಎಸ್.ಎಲ್.ಸಿ. ಉತ್ತೀರ್ಣ	ರೂ.1500	ರೂ.1000	ರೂ.2500
5	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 5 ವರ್ಷದ ಅನುಭವ	ರೂ.1531	ರೂ.1000	ರೂ.2531
6	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ	ರೂ.1563	ರೂ.1000	ರೂ.2563
7	ಅಂಗನವಾಡಿ ಸಹಾಯಕಿಯರು	ರೂ.750	ರೂ.500	ರೂ.1250
8	ಮಿನಿ ಅಂಗನವಾಡಿ ಕಾರ್ಯಕರ್ತೆಯರು	ರೂ.750	ರೂ.500	ರೂ.1250

ಬಿ.ಎಂ.ಟಿ.ಸಿ. ಹವಾನಿಯಂತ್ರಿತ ಬಸ್ ಸೇವೆ

400 (941) ಶ್ರೀ ಹ್ಯಾರೀಸ್. ಎನ್.ಎ (ಶಾಂತಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಎಂ.ಟಿ.ಸಿ. ಹವಾನಿಯಂತ್ರಿತ ಬಸ್ ಸೇವೆಗಾಗಿ ಒಟ್ಟು ಎಷ್ಟು ಬಸ್‌ಗಳನ್ನು ಬಳಸಿಕೊಳ್ಳಲಾಗಿದೆ;

ಆ) ಹವಾ ನಿಯಂತ್ರಿತ ಬಸ್ ಸೇವೆಯನ್ನು ಲಾಭದಾಯಕ ಹಾಗೂ ಜಯಪ್ರಿಯಗೊಳಿಸಲು ಸರ್ಕಾರದ ಕಾರ್ಯಕ್ರಮಗಳೇನು;

ಇ) ಕಳೆದ ಎರಡು ವರ್ಷಗಳಲ್ಲಿನ ಲಾಭ–ನಷ್ಟದ ವಿವರಗಳೇನು; ಈ ಅವಧಿಯಲ್ಲಿನ ಬಸ್ ಖರೀದಿ ಕುರಿತು ವಿವರಗಳೇನು?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಬೆಂ.ಮ.ಸಾ.ಸಂಸ್ಥೆಯು ಹವಾನಿಯಂತ್ರಿತ ಬಸ್ಸು ಸೇವೆಗಾಗಿ ಒಟ್ಟು 530 ಬಸ್ಸುಗಳನ್ನು ಬಳಸಿಕೊಳ್ಳುತ್ತಿದೆ.